ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 105/2015

(ಪ್ರಾಸಾ-6 ಚಾಸಾ-10 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 04.01.2023.

| | | |
|---|---|---|
| ಸಾಕ್ಷಿದಾರರ ಹೆಸರು | - | ಹರೀಶ್ |
| ತಂದೆಯ ಹೆಸರು | - | ಮುನಿರೆಡ್ಡಿ |
| ವಯಸ್ಸು | - | 36 ವರ್ಷ, |
| ಉದ್ಯೋಗ | - | ವ್ಯವಸಾಯ ಸ, |
| ವಾಸ | - | ಗೋಪಸಂದ್ರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ ತೋರಿಸಿದ ದಾಖಲೆ ಮೇಲೆ ನನ್ನ ಸಹಿ ಇಲ್ಲ. ಸಾಕ್ಷಿಗೆ ತೋರಿಸಿದ ದಾಖಲೆ ಮು.ಮಾ-1 ರಿಂದ 3 ಇವುಗಳ ಅಮಾನತು ಮಹಜರ್ ಇದ್ದು ಅದನ್ನು ಗುರ್ತಿಸುವ ಸಲುವಾಗಿ ನಿಪಿ-5 ಎಂದು ಗುರ್ತಿಸಲಾಯಿತು. ಸಾಕ್ಷಿದಾರರು ನಿರಾಕರಿಸಿದ ಸಹಿಯನ್ನು ನಿಪಿ-5(ಎ) ಎಂದು ಗುರ್ತಿಸುವ ಸಲುವಾಗಿ ನಿಶಾನೆ ಮಾಡಲಾಯಿತು. ಈಗ ತೋರಿಸಲಾದ ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ನಾನು ನೋಡಿಲ್ಲ. ಅವರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಮತ್ತು ನನ್ನ ಸಮಕ್ಷಮ ಮು.ಮಾ-1 ರಿಂದ 3 ಇವುಗಳನ್ನು ಹಾಜರುಪಡಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

2. ದಿಃ16.02.2015 ರಂದು ಮಧ್ಯಾಹ್ನದ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-8 ಹಾಗೂ 9 ಇವರನ್ನು ಪಂಚಸಾಕ್ಷಿದಾರರಾಗಿ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಠಾಣೆಯಲ್ಲಿ 1 ರಿಂದ 3 ಮತ್ತು 5 ನೇ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ನಂತರ 2 ಮತ್ತು 3 ನೇ ಆರೋಪಿತರು ನಮ್ಮನ್ನು ರಾಮಸಾಗರ ಗ್ರಾಮದ ಬಳಿ ಇರುವ ಚಂದಾಪುರ ರಸ್ತೆಯಲ್ಲಿರುವ ಶ್ರೀ ಆಂಜನೇಯ ದೇವಸ್ಥಾನದ ಹಿಂದೆ

ಕರೆದುಕೊಂಡು ಹೋಗಿ ಪೊದೆಯಲ್ಲಿದ್ದ ಎರಡು ಕಬ್ಬಿಣದ ರಾಡ್ ಮತ್ತು ಒಂದು ದೊಣ್ಣೆಯನ್ನು ತೆಗೆದು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಪೋಲಿಸರು ನಿಪಿ-5 ರಂತೆ ಮಹಜರ್ ಅನ್ನು ಸಂಜೆ 4 ರಿಂದ 5 ಘಂಟೆ ಸಮಯದಲ್ಲಿ ಮಾಡಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆಗ ನಿಪಿ-5(ಎ)ಯಂತೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.ಆರೋಪಿತರು ಹಾಜರುಪಡಿಸಿದ ದೊಣ್ಣೆ ಮತ್ತು ಕಬ್ಬಿಣದ ರಾಡ್ ಮು.ಮಾ-1 ರಿಂದ 3 ಇರುತ್ತವೆ ಎಂದರೆ ಸರಿಯಲ್ಲ. ನನ್ನೊಂದಿಗೆ ಚಾಸಾ-8 ಮತ್ತು 9 ಸಹ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸಹ ನಿಪಿ-5 ಕ್ಕೆ ನಮ್ಮ ಸಮಕ್ಷಮ ಸಹಿ ಮಾಡಿದ್ದಾರೆಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು